**-:ಮಧ್ಯಂತರ ಅರ್ಜಿ ಸಂಖ್ಯೆ:*3* ರ ಕುರಿತಾಗಿ ಆದೇಶ:-**

ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:*3* ನ್ನು ವಾದಿಯು ಕ್ರಮಾದೇಶ *06* ನಿಯಮ *16* ಮತ್ತು *17* ಸಹವಾಚಕ ಕಲಂ *151* ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ವಾದಪತ್ರದ ಖಂಡಿಕೆ *3* ರಲ್ಲಿನ *6* ಮತ್ತು *23* ನೇ ಸಾಲಿನಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳನ್ನು ತಿದ್ದುಪಡಿ ಮಾಡಲು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ.

*2.* **ವಾದಿಯು ಅರ್ಜಿಗೆ ಪೂರಕವಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ತನ್ನ ಪ್ರಮಾಣಪತ್ರದಲ್ಲಿನ ಅಂಶಗಳು ಈ ಕೆಳಗಿನಂತೆ ಇವೆಃ-**

ನಾನು ಈ ಪ್ರಕರಣದ ವಾದಿಯಾಗಿದ್ದು, ನನಗೆ ಈ ಪ್ರಕರಣದ ವಸ್ತುವಿಷಯಗಳು ನನಗೆ ತಿಳಿದಿದೆ. ನಾನು ಈ ಪ್ರಕರಣವನ್ನು ಪ್ರತಿವಾದಿಯರ ವಿರುದ್ದ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ಸಲ್ಲಿಸಿರುತ್ತೇನೆ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಬೆರಳಚ್ಚಿನ ತಪ್ಪಿನಿಂದಾಗಿ ಖಂಡಿಕೆ *3* ರಲ್ಲಿ *6* ಮತ್ತು *23* ನೇ ಸಾಲಿನಲ್ಲಿ ಬೆರಳಚ್ಚಿನ ತಪ್ಪಿನಿಂದ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳು ನಮೂದಾಗಿದ್ದು, ಸದರಿ ನಮೂದಾದ ಅಂಶಗಳು ಯಾವುದೇ ದುರುದ್ದೇಶದಿಂದ ಕೂಡಿರುವುದಿಲ್ಲ. ಈ ಪ್ರಸ್ತಾವಿತ ತಿದ್ದುಪಡಿಯು ಉಭಯ ಪಕ್ಷಗಾರರ ನಡುವಣ ಪ್ರಕರಣದ ಪರಿಪೂರ್ಣ ವಿಲೇವಾರಿಗೆ ತುಂಬಾ ಅವಶ್ಯಕವಾಗಿರುತ್ತದೆ. ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರು ಪಕ್ಷಗಾರರಿಗೆ ಯಾವುದೇ ಹಾನಿಯುಂಟಾಗುವುದಿಲ್ಲ ಬದಲಾಗಿ ಈ ಅರ್ಜಿಯನ್ನು ತಿರಸ್ಕರಿಸಿದಲ್ಲಿ ವಾದಿಗೆ ತುಂಬಲಾಗದ ಹಾನಿಯುಂಟಾಗುತ್ತದೆ. ಪ್ರಸ್ತಾವಿತ ತಿದ್ದುಪಡಿಯು ದಾವೆಯ ಸ್ವರೂಪವನ್ನು ಬದಲಾವಣೆ ಮಾಡುವುದಿಲ್ಲ. ಆದ್ದರಿಂದ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಈ ಅರ್ಜಿಯನ್ನು ಪುರಸ್ಕರಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

*3.* **ಮೇಲ್ಕಂಡ ಮಧ್ಯಂತರ ಅರ್ಜಿ ಸಂಖ್ಯೆಃ*3* ಕ್ಕೆ ಪ್ರತಿವಾದಿಯ ಪರ ವಕೀಲರು ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.**

*4.* ಮೇಲ್ಕಾಣಿಸಿದ ಸಂಗತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಈ ಕೆಳಕಂಡ ಅಂಶಗಳು ನನ್ನ ಪರಿಶೀಲನೆಗೆ ಉದ್ಭವಿಸಿರುತ್ತವೆಃ-

**ಅಂಶಗಳು**

1. **ವಾದಿ/ಅರ್ಜಿದಾರರು ಮಧ್ಯಂತರ ಅರ್ಜಿ ಸಂಖ್ಯೆಃ*3* ರಲ್ಲಿ ಕೋರಿರುವಂತೆ ಪರಿಹಾರವನ್ನು ಪಡೆಯಲು ಅರ್ಹರೆ*?***
2. **ಹಾಗಿದ್ದಲ್ಲಿ ಯಾವ ಆದೇಶ*?***

5. ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿರುತ್ತದೆ:-

ಅಂಶ – 1 : ಸಕಾರಾತ್ಮಕವಾಗಿ,

ಅಂಶ – 2 : ಅಂತಿಮ ಆದೇಶದಂತೆ.

## ಕಾ ರ ಣ ಗ ಳು

7. **ಅಂಶ – 1** :- ವಾದಿಯರು ಪ್ರಸ್ತುತ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ದಾವಾ ಅನುಸೂಚಿತ ಸ್ವತ್ತುಗಳಿಗೆ ಸಂಬಂಧಿಸಿದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತಾರೆ.

8. ಪ್ರಸ್ತುತ ಈ ಮಧ್ಯಂತರ ಅರ್ಜಿ ಸಂಖ್ಯೆ:3 ನ್ನು ವಾದಿಯು ಕ್ರಮಾದೇಶ 06 ನಿಯಮ 16 ಮತ್ತು 17 ಸಹವಾಚಕ ಕಲಂ 151ರ ಅಡಿಯಲ್ಲಿ ಅರ್ಜಿಯೊಂದಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ನಮೂದಿಸಿರುವ ಅಂಶಗಳನ್ನು ಪರಿಗಣಿಸಿ ವಾದಪತ್ರದ ಖಂಡಿಕೆ 3ರಲ್ಲಿನ 6 ಮತ್ತು 23ನೇ ಸಾಲಿನಲ್ಲಿ ಅರ್ಜಿಯಲ್ಲಿ ನಮೂದಿಸಿರುವ ಅಂಶಗಳನ್ನು ತಿದ್ದುಪಡಿ ಮಾಡಲು ಕೋರಿ ಪ್ರಾರ್ಥಿಸಿಕೊಂಡಿರುತ್ತಾರೆ.

9. ವಾದಿಯು ಸಲ್ಲಿಸಿರುವ ವಾದಪತ್ರವನ್ನು ಪರಿಶೀಲಿಸಲಾಗಿ ವಾದಿಯು 1ರಿಂದ 4ನೇ ಪ್ರತಿವಾದಿಯರ ವಿರುದ್ದ ದಾವೆಯನ್ನು ಸಲ್ಲಿಸಿರುತ್ತಾರೆ. ಆದರೆ ವಾದಪತ್ರದ 3ನೇ ಖಂಡಿಕೆಯಲ್ಲಿ 6 ಮತ್ತು 23ನೇ ಸಾಲಿನಲ್ಲಿ 4 ಮತ್ತು 5ನೇ ಪ್ರತಿವಾದಿಗಳು ಎಂದು ಉಲ್ಲೇಖಿತವಾಗಿರುತ್ತದೆ. ಹಾಗಾಗಿ ವಾದಿಯು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿದಾಗ ಪ್ರಸ್ತಾವಿತ ತಿದ್ದುಪಡಿಯಲ್ಲಿನ ಅಂಶಗಳು ಬೆರಳಚ್ಚಿನ ತಪ್ಪಿನಿಂದ ಏರ್ಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಹಾಗಾಗಿ ನ್ಯಾಯ ಮತ್ತು ಸಮಾನತೆಯ ದೃಷ್ಟಿಯಿಂದ ಮತ್ತು ವ್ಯಾಜ್ಯಗಳ ಬಾಹುಳ್ಯತೆಯನ್ನು ತಡೆಯಲು ಹಾಗೂ ಉಭಯ ಪಕ್ಷಗಾರರ ನಡುವಣ ಸಂಪೂರ್ಣ ವಿವಾದಾಂಶದ ಕುರಿತು ನಿರ್ಣಯ ನೀಡಲು ಪ್ರಸ್ತಾವಿತ ತಿದ್ದುಪಡಿಯನ್ನು

ಪುರಸ್ಕರಿಸುವುದು ಸೂಕ್ತವೆಂದು ನ್ಯಾಯಾಲಯ ನಿರ್ಣಯಕ್ಕೆ ಬರುತ್ತದೆ. ಆದರೆ ಈ ಪ್ರಕರಣದಲ್ಲಿ ಈಗಾಗಲೇ ಉಭಯ ಪಕ್ಷಗಾರರು ವಾದ ಪ್ರತಿವಾದಪತ್ರ ಸಲ್ಲಿಸಿದ್ದು, ವಿವಾದಾಂಶಗಳು ರೂಪಿತವಾಗಿ ವಾದಿಯ ಪರವಾಗಿ ಸಾಕ್ಷಿ ವಿಚಾರಣೆ ಮಾಡಿದ್ದು, ಈ ಹಂತದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಹಾಗಾಗಿ ಸದರಿ ವಿಳಂಬದ ಕಾರಣಕ್ಕಾಗಿ ವಾದಿಯು ಪ್ರತಿವಾದಿಗೆ ರೂ.*100* ಖರ್ಚನ್ನು ಪಾವತಿಸಬೇಕು ಎಂದು ನಿರ್ದೇಶಿಸಲಾಗುತ್ತದೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣಿಸಿ ಅಂಶ *1* ನ್ನು ಸಕಾರಾತ್ಮಕ ಎಂದು ನಿರ್ಣಯಿಸಲಾಗಿರುತ್ತದೆ.

*10.* **ಅಂಶ – *2*** :- ಮೇಲ್ಕಾಣಿಸಿದ ಎಲ್ಲಾ ಕಾರಣಗಳ ಮೇಲಿಂದಾಗಿ ಈ ಕೆಳಕಾಣಿಸಿದಂತೆ ಆದೇಶಿಸಿರುತ್ತೇನೆ:-

## ಆದೇಶ

ವಾದಿ/ಅರ್ಜಿದಾರರು ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ *06,* ನಿಯಮ *16* ಮತ್ತು *17* ಸಹವಾಚಕ ಕಲಂ *151* ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ:*3* ನ್ನು ರೂ.*100* ಖರ್ಚು ಸಹಿತ ಪುರಸ್ಕರಿಸಲಾಗಿದೆ.

ಪ್ರಕರಣವನ್ನು ದಿ:*09-02-2018* ಕ್ಕೆ ವಾದಪತ್ರದ ತಿದ್ದುಪಡಿಗಾಗಿ ಮತ್ತು ತಿದ್ದುಪಡಿ ವಾದಪತ್ರವನ್ನು ಸಲ್ಲಿಸಲು ನಿಗಧಿಪಡಿಸಲಾಗಿದೆ.

*ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು*
*ಪ್ರ.ದ.ನ್ಯಾ.ದಂ., ತರೀಕೆರೆ.*